ದಿನಾಂಕಃ 22.11.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.
ಪಾಟೀ ಸವಾಲುಃ ಶ್ರೀ ಎ.ಎನ್.ಜಿ ಪ್ರತಿವಾದಿ ಪರ ವಕೀಲರಿಂದ

ನಾನು ದರ್ಗಾಜೋಗಿಹಳ್ಳಿಯಲ್ಲಿ ವಾಸವಾಗಿದ್ದೇನೆ. ದರ್ಗಾಜೋಗಿಹಳ್ಳಿಯಿಂದ ದಾವಾಸ್ವತ್ತಿಗೂ ಸುಮಾರು 2 ಕೀ.ಮೀ ಅಂತರವಿದೆ. ವಾದಿ ನನ್ನ ಭಾವ. ವಾದಿ ಸಾಕ್ಷಿ ಹೇಳಲು ಕರೆದಿದ್ದ ಮೇರೆಗೆ ನಾನು ಬಂದು ಸಾಕ್ಷಿ ನುಡಿಯುತ್ತಿದ್ದೇನೆ ಮತ್ತು ಗಲಾಟೆ ನಡೆದ ಸ್ಥಳದಲ್ಲಿ ಹಾಜರಿದ್ದೆ ಎಂದು ನುಡಿಯುತ್ತಾರೆ. ನನಗೆ ಪ್ರತಿವಾದಿಯ ಪರಿಚಯವಿಲ್ಲ. ಗಲಾಟೆಯಾದ ಮೇಲೆ ಪರಿಚಯವಾಗಿರುತ್ತಾರೆ. ಗಲಾಟೆಗೆ ಮೊದಲು ಪ್ರತಿವಾದಿ ನನಗೆ ಪರಿಚಯವಿರಲಿಲ್ಲ. ಸರ್ವೇ ನಂ. 50/1 ರಲ್ಲಿ 4.4 ಗುಂಟೆ ಪ್ರತಿವಾದಿ ಖರೀದಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾಸ್ವತ್ತು ಮೂಲತಃ ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ. ದಾವಾಸ್ವತ್ತಿನ ವಿಸ್ತೀರ್ಣ 32 1/2 X 21 ಆಗಿರುತ್ತದೆ. ದಾವಾಸ್ವತ್ತಿನ ಚೆಕ್ಕುಬಂಧಿ ನನಗೆ ಗೊತ್ತಿಲ್ಲ. 2019 ನೇ ಇಸವಿಯಲ್ಲಿ ಪ್ರತಿವಾದಿಗಳು ದಾವಾ ಸ್ವತ್ತಿಗೆ ಅತಿಕ್ರಮ ಪ್ರವೇಶ ಮಾಡಿರುತ್ತಾರೆ. ವಾದಿ ದಾವಾಸ್ವತ್ತಿಗೆ ಕಾಂಪೌಂಡ್ ಹಾಕುವ ವಿಚಾರವಾಗಿ ಪ್ರತಿವಾದಿಯವರು ಗಲಾಟೆ ಮಾಡಿರುತ್ತಾರೆ. ಸದರಿ ಕೇಸಿಗೆ ಸಂಬಂಧಿಸಿದಂತೆ ನನಗೆ ಸಂಪೂರ್ಣ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಕಾಂಪೌಂಡ್ ಹಾಕಲು ಸಂಬಂಧ ಪಟ್ಟ ಪ್ರಾಧಿಕಾರದಿಂದ ವಾದಿ ಏನಾದರೂ ದಾಖಲೆ ಪಡೆದಿದ್ದಾರಾ ಎಂದರೆ ಆ ರೀತಿ ಅನುಮತಿ ಪಡೆದಿರಲಿಲ್ಲ. ಕ್ರಯಪತ್ರದ ಮೇರೆಗೆ ಕಾಂಪೌಂಡ್ ಹಾಕುತ್ತಿದ್ದರು.

ದಾವಾಸ್ವತ್ತಿಗೆ ವಾದಿ ಸರ್ವೇ ಮಾಡಿಸಿದ್ದಾರೆ. ಸದರಿ ದಾಖಲಾತಿಗಳನ್ನು ನಾನು ನೋಡಿರುವುದಿಲ್ಲ. ಸರ್ವೇ ಮಾಡಿಸಿರುವ ದಿನಾಂಕ ನನಗೆ ಗೊತ್ತಿಲ್ಲ. ವಾದಿ ನನಗೆ ಕರೆ ಮಾಡಿ ಹೇಳಿರುವ ವಿಚಾರವನ್ನು ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿಲ್ಲ ಎಂದರೆ ಸರಿ. ವಾದಿಯನ್ನು ಹೊರತು ಪಡಿಸಿ ಅಲ್ಲಿದ್ದ ವ್ಯಕ್ತಿಗಳು ಕರೆಯ ಮೂಲಕ ವಿಷಯ ತಿಳಿಸಿರುತ್ತಾರೆ. ಅಲ್ಲಿರುವ ವ್ಯಕ್ತಿಗಳು ನನ್ನ ಸ್ನೇಹಿತರಾಗಿದ್ದು. ಸುಮಾರು 20 ವರ್ಷಗಳಿಂದ ನನ್ನ ಜೊತೆ ಸಂಪರ್ಕದಲ್ಲಿ ಇಲ್ಲ ಎಂದು ನುಡಿಯುತ್ತಾರೆ. ಜಗಳ ನಡೆದ ವಿಚಾರವಾಗಿ ನಾನಾಗಲೀ ಅಥವಾ ವಾದಿಯಾಗಲೀ ಪೋಲೀಸ್ ಠಾಣೆಗೆ ದೂರು ನೀಡಿರುವುದಿಲ್ಲ. ಪ್ರತಿವಾದಿಯವರೇ ಪೋಲೀಸ್ ಠಾಣೆಗೆ ಹೋಗಿ ದೂರು ನೀಡಿರುತ್ತಾರೆ. ದಾವಾಸ್ವತ್ತು ಅಸ್ತಿತ್ವದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯವರು 4.4 ಗುಂಟೆ ಜಮೀನನ್ನು ಖರೀದಿ ಮಾಡಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಯವರ

ಸ್ವಾಧೀನದಲ್ಲಿರುವ ಸ್ವತ್ತನ್ನು ನೀವು ಕಬ್ಜ ಮಾಡಲು ಹೋದಾಗ ಪೋಲೀಸ್ ಠಾಣೆಗೆ ದೂರು ನೀಡಿದ್ದಾರೆ ಎಂದರೆ ಸರಿ. ಅಸ್ತಿತ್ವದಲ್ಲಿ ಇಲ್ಲದೇ ಇರುವ ದಾವಾಸ್ವತ್ತನ್ನು ಹೇಮಾವತಿ ಕಡೆಯಿಂದ ವಾದಿ ಖರೀದಿ ಮಾಡಿ ಪ್ರತಿವಾದಿಗೆ ತೊಂದರೆ ನೀಡಲು ಸುಳ್ಳು ಕೇಸು ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ವಾದಿ ನನ್ನ ಸ್ವಂತ ಭಾವನಾಗಿರುವುದರಿಂದ ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾಸ್ವತ್ತಿನ ಬಗ್ಗೆ ಹಾಗೂ ಪ್ರತಿವಾದಿಗಳ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿ. ವಾದಿ ಯಾವ ಪರಿಹಾರ ಕೋರಿ ಸದರಿ ದಾವೆಯನ್ನು ಸಲ್ಲಿಸಿದ್ದಾರೆ ಎಂದು ತಿಳಿದುಕೊಂಡಿದ್ದೀರಾ ಎಂದರೆ ಅವರು ಖರೀದಿ ಮಾಡಿದ್ದಾರೆ ಖರೀದಿ ಪತ್ರದ ಮೇರೆಗೆ ಸದರಿ ದಾವೆ ಹೂಡಿದ್ದಾರೆ ಎಂದು ನುಡಿಯುತ್ತಾರೆ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ,**
**ದೊಡ್ಡಬಳ್ಳಾಪುರ .**